Establishment of Forest College at Jog Falls

814. Sri K. H. SRINIVAS (Sagar).—

Will the Minister of State for Forests be pleased to state:—

(*a*) whether it is under consideration of the Government to establish a Forest College inthe State of Mysore;

(*b*) if so, whether the Government proposes to establish the same at Jog Falls, where buildings and all other facilities are available?

Sri ALUR HANUMANTHAPPA (Minister of State for Forests).—

(*a*) No.

(*b*) Does not arise.

2-00 P. M.

ಶ್ರೀ ಕೆ. ಎಚ್. ಶ್ರೀನಿವಾಸ್.—ನಾನು ಕೇಳಿದ (ಅ) ಪ್ರಶ್ನೆಗೆ, ಇಲ್ಲವೆಂದು ಉತ್ತರ ಕೊಟ್ಟಿದ್ದೀರಿ. ಹಿಂದೆ ಶಿವಮೊಗ್ಗದ ಸದಸ್ಯರು ಎಲ್ಲಾ ಅಲ್ಲಿಗೆ ಒಂದು ಮೆಡಿಕಲ್ ಕಾಲೇಜು ಮತ್ತು ಫಾರೆಸ್ಟ್ ಕಾಲೇಜು ಕೊಡಬೇಕೆಂದು ಕೇಳಿದಾಗ, ಮಾನ್ಯ ನಿಜಲಿಂಗಪ್ಪನವರು ಕೊಡುತ್ತೇವೆಂದು ಒಂದು ಭರವಸೆಯನ್ನು ಕೊಟ್ಟಿದ್ದಾರೆ. ಈ ಪ್ರೊಪೋಸಲ್ ಯಾವುದೂ ಇರಲಿಲ್ಲವೇ? ಆಥವಾ ಇದನ್ನು ಶಿವಮೊಗ್ಗಕ್ಕೆ ಕೊಡಬೇಕೆಂದು ಏನಾದರೂ ಕೈಬಿಟ್ಟಿದ್ದಾರೆಯೇ? ಇದನ್ನು ಇನ್ನಾದರೂ ಕನ್‌ಸಿಡರ್ ಮಾಡಬೇಕು. ಮೈಸೂರು ರಾಜ್ಯದಲ್ಲಿ ಫಾರೆಸ್ಟ್ ಕಾಲೇಜು ಮಾಡುವ ಪ್ರಸಂಗ ಬಂದರೆ ಅದನ್ನು ಶಿವಮೊಗ್ಗದ ಜೋಗ್‌ಫಾಲ್ಸ್‌ನಲ್ಲಿ ಆರಂಭಿಸುವಂತೆ ಇದನ್ನು ಪರಿಶೀಲನೆ ಮಾಡುತ್ತೀರಾ?

†ಶ್ರೀ ಆಲೂರು ಹನುಮಂತಪ್ಪ.—ಮಾನ್ಯ ಸದಸ್ಯರು ಹಿಂದಿನ ಮುಖ್ಯಮಂತ್ರಿಗಳು ಭರವಸೆಯನ್ನು ಕೊಟ್ಟ ವಿಷಯದಲ್ಲಿ ಕೇಳುತ್ತಿದ್ದಾರೆ. ಆ ವಿಚರ ನನ್ನಲ್ಲಿ ಇಲ್ಲ. ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ. ನಮ್ಮ ರಾಜ್ಯದಲ್ಲಿ ಅರಣ್ಯ ಕಾಲೇಜನ್ನು ಪ್ರಾರಂಭಿಸುವ ವಿಚಾರ ಸದ್ಯಕ್ಕೆ ಇಲ್ಲ. ಕೊಯಮತ್ತೂರು ಮತ್ತು ಡೆಹರಾಡೂನಿನಲ್ಲಿರುವ ಫಾರೆಸ್ಟ್ ಕಾಲೇಜುಗಳಿಗೆ ನಮ್ಮ ರಾಜ್ಯದ ಅಧಿಕಾರಿಗಳನ್ನು ಟ್ರೇನಿಂಗಿಗೆ ನಾವು ಕಳುಹಿಸುತ್ತಿದ್ದೇವೆ. ಆದ್ದರಿಂದ ಈಗ ನಮ್ಮ ರಾಜ್ಯದಲ್ಲಿ ಫಾರೆಸ್ಟ್ ಕಾಲೇಜನ್ನು ಪ್ರಾರಂಭಿಸುವ ವಿಚಾರವನ್ನು ಸರ್ಕಾರದವರು ಯೋಚನೆ ಮಾಡುತ್ತಿಲ್ಲ.

ಶ್ರೀ ಎಸ್. ಎಸ್. ಅರಕೇರಿ.—ಕೊಯಮತ್ತೂರು ಮತ್ತು ಡೆಹರಾಡೂನಿಗೆ ನಮ್ಮ ರಾಜ್ಯದಿಂದ ಎಷ್ಟು ಜನ ವಿದ್ಯಾರ್ಥಿಗಳನ್ನು ಒಂದು ವರ್ಷಕ್ಕೆ ಕಳುಹಿಸುತ್ತಿದ್ದೀರಿ, ಮತ್ತು ಅವರಿಗೆ ಎಷ್ಟು ವಿದ್ಯಾರ್ಥಿ ವೇತನವನ್ನು ಕೊಡುತ್ತಿದ್ದೀರಿ?

ಶ್ರೀ ಆಲೂರು ಹನುಮಂತಪ್ಪ.—ಆ ಪ್ರಶ್ನೆಗೂ ಇದಕ್ಕೂ ಸಂಬಂಧವಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಮೈಸೂರು ರಾಜ್ಯದಲ್ಲಿ ಅರಣ್ಯ ಸಂಪತ್ತು ಹಾಸ್ತಿ ಇದೆ ಅದರಲ್ಲಿಯೂ ಮುಖ್ಯವಾಗಿ ಮಲೆನಾಡಿನಲ್ಲಿ, ಶಿವಮೊಗ್ಗ, ದಕ್ಷಿಣಕನ್ನಡ ಜಿಲ್ಲೆ, ಕೂರ್ಗ್, ಉತ್ತರ ಕನ್ನಡ ಜಿಲ್ಲೆ ಈ ಪ್ರದೇಶಗಳಲ್ಲಿ ಅರಣ್ಯ ಸಂಪತ್ತು ವಿಶೇಷವಾಗಿ ಇದೆ. ಆದ್ದರಿಂದ ಈ ಪ್ರದೇಶಗಳಲ್ಲಿ ಎಲ್ಲಾದರೂ ಒಂದು ಕಡೆ ಒಂದು ಫಾರೆಸ್ಟ್ ಕಾಲೇಜನ್ನು ಸ್ಥಾಪನೆ ಮಾಡುವ ಬಗ್ಗೆ ಯೋಚನೆ ಮಾಡುತ್ತೀರಾ?

ಶ್ರೀ ಆಲೂರು ಹನುಮಂತಪ್ಪ.—ಈ ಬಗ್ಗೆ ನಾನು ಈಗತಾನೆ ಹೇಳಿದ್ದೇನೆ. ಹಿಂದಿನ ಮುಖ್ಯಮಂತ್ರಿಗಳು ಈ ಬಗ್ಗೆ ಆಶ್ವಾಸನೆಯನ್ನು ಕೊಟ್ಟಿದ್ದಾರೆ ಎಂದು ಹೇಳುತ್ತಿದ್ದಾರೆ, ಆದ್ದರಿಂದ ಅದನ್ನೆಲ್ಲಾ ಪರಿಶೀಲನೆ ಮಾಡಿದ ನಂತರ ಇದಕ್ಕೆ ಉತ್ತರ ಕೊಡುತ್ತೇನೆ.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯಿತು.